**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 1888/2023 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ಪದ್ಮಾವತಿ |
| ತಂದೆಃ ಗಂಡ | ಃ | ಅಮೃತ ಸನಗುಂದಿ |
| ವಯಸ್ಸು | ಃ | ೫೩ ವರ್ಷ |
| ಉದ್ಯೋಗ | : | ಸರಕಾರಿ ನೌಕರರು |
| ವಾಸಸ್ಥಳ | ಃ | ಹಿತ್ತಲಶಿರೂರ |

ದಿನಾಂಕಃ ೧೨.೦೭.೨೦೨೪
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿ ನನ್ನ ಮೈದುನ. ಚಾಸಾ-4 ನನ್ನ ಮಗ. ಚಾಸಾ-2, 3, 5, 6 ರವರ ಪರಿಚಯ ಇರುತ್ತದೆ.

ನಾನು ಕುಸುಬಿ ರಾಶಿ ಮಾಡಲು ಹೋದಾಗ ಆರೋಪಿ ನನಗೆ ಹೊಡೆ ಬಡೆ ಮಾಡಿರುತ್ತಾನೆ. ಆ ಕಾರಣದಿಂದ ನಾನು ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ಫಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ, ಫಿರ್ಯಾದಿಯನ್ನು ನಿಪಿ-೧ ಎಂದು ಸಹಿಯನ್ನು ನಿಪಿ-೧(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ನನ್ನ ಗಂಡ ಸುಮಾರು ೮ ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ಗಂಡ ತೀರಿಕೊಂಡ ನಂತರ ಬಿ.ಎಸ್.ಎನ್.ಎಲ್. ಕಂಪನಿಯಲ್ಲಿ ಅನುಕಂಪದ ಆಧಾರದ ಮೇಲೆ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಹಿತ್ತಲಶಿರೂರ ಗ್ರಾಮದ ಸ.ನಂ. ೨೪೫/೩ ಕ್ಷೇತ್ರ ೩ ಎ-೩೬ ಗುಂಟೆ ಜಮೀನು ಇರುತ್ತದೆ, ಅದನ್ನು ಉಳುಮೆ ಮಾಡಿ ಉಪಜೀವನ ಸಾಗಿಸುತ್ತಾ ಬಂದಿರುತ್ತೇನೆ ಎಂಧರೆ ಸರಿ. ಸದರಿ ಜಮೀನಿನಲ್ಲಿ ಬೆಳೆದ ಕುಸುಬಿ ಬೆಳೆಯನ್ನು ರಾಶಿ ಮಾಡಲು ನಾನು, ಚಾಸಾ-೪ ರಿಂದ ೬ ರವರು ದಿ.೧೬.೦೨.೨೦೨೩ ರಂದು ಬೆಳಿಗ್ಗೆ ೯.೦೦ ಗಂಟೆಗೆ ಹೋಗಿರುತ್ತೇವೆ ಎಂಧರೆ ಸರಿ. ಆಗ ಆರೋಪಿ ಸದರಿ ನಮ್ಮ ಜಮೀನಿಗೆ ಅತಿಕ್ರಮಣ ಪ್ರವೇಶ ಮಾಡಿ ರಾಶಿ ಮಾಡದಂತೆ ನಮ್ಮನ್ನು ತಡೆ ಹಿಡಿದಿರುತ್ತಾರೆ ಎಂದರೆ ಸರಿ. ಆರೋಪಿ ನಮಗೆ ಅವಾಚ್ಯವಾಗಿ ಬೈದಿರುತ್ತಾನೆ ಎಂದರೆ ಸರಿ. ಏ ರಂಡಿ

ಎಂದು ಕೂದಲು ಹಿಡಿದು ಎಳೆದಾಡಿ ನನ್ನ ಕಪಾಳಕ್ಕೆ ಹೊಡೆದಿರುತ್ತಾನೆ ಎಂದರೆ ಸರಿ. ಚಾಸಾ-೪ ರವರು ಜಗಳ ಬಿಡಿಸಲು ಬಂದಾಗ ಅವನಿಗೂ ಕೂಡ ಕೈಯಿಂದ ಕಪಾಳಕ್ಕೆ ಹೊಡೆದಿರುತ್ತಾನೆ ಎಂದರೆ ಸರಿ. ಚಾಸಾ-೫, ೬ ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ಆರೋಪಿ ನಮಗೆ ಇವತ್ತು ಉಳಿದಿದ್ದೀರಿ ಇನ್ನೊಮ್ಮೆ ಸಿಕ್ಕರೆ ಜೀವ ಸಹಿತ ಖಲಾಸ ಮಾಡುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾನೆ ಎಂಧರೆ ಸರಿ. ದಿ. ೨೧.೦೨.೨೦೨೩ ರಂದು ಊರಲ್ಲಿ ವಿಚಾರಿಸಿ ಫಿರ್ಯಾದಿ ಸಲ್ಲಿಸಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪ**ರ ಶ್ರೀ ಎಂ.ವಿ.ಇ. **ವಕೀಲರಿಂದ**

[ ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.]

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ